# 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು.

Spl.C.26/2020

C.W.1
P.W. 1

ದಿನಾಂಕಃ 30-10-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಹೆಸರು | ಃ ಉಮಾದೇವಿ |
| ತಂದೆಯ ಹೆಸರು | ಃ ರಾಮಯ್ಯ |
| ವಯಸ್ಸು | ಃ 23 ವರ್ಷ |
| ಉದ್ಯೋಗ | ಃ ಮನೆಗೆಲಸ |
| ವಾಸ | ಃ ಸಿಂಗದಹಳ್ಳಿ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ನನಗೆ ಚಾಸಾ-2 ರಿಂದ 4 ಗೊತ್ತು. ಚಾಸಾ-5 ಗೊತ್ತಿಲ್ಲ . ಚಾಸಾ-6,7 ಗೊತ್ತು. ಚಾಸಾ-8 ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ಗೊತ್ತು. ಆರೋಪಿತರು ನಮ್ಮ ಊರಿನ ಪಕ್ಕದ ಹಳ್ಳಿಯವರು. ನಾನು ಪರಿಶಿಷ್ಟ ಜಾತಿಯ ಮಾದಿಗ ಜನಾಂಗಕ್ಕೆ ಸೇರಿದವಳು. ಆರೋಪಿತರು 1 ರಿಂದ 3 ರವರು ವಕ್ಕಲಿಗ ಜನಾಂಗಕ್ಕೆ ಸೇರಿದವರು. ಆರೋಪಿ-4 ರವರು ಮಡಿವಾಳ ಜನಾಂಗಕ್ಕೆ ಸೇರಿದವರು.

2) ನಮಗೆ ಸೇರಿದ ಸರ್ವೇ ನಂ.24/1F 1 ಎಕರೆ ಜಮೀನು ಸಿಂಗದಹಳ್ಳಿ ಗ್ರಾಮದಲ್ಲಿದ್ದು ಅದು ನನ್ನ ತಾತನಾದ ಎಲೆತಿಮ್ಮಯ್ಯನ ಹೆಸರಿನಲ್ಲಿ ಇರುತ್ತದೆ . ಸದರಿ

ಜಮೀನಿನ ಸಾಗುವಳಿ ನಾವೇ ಮಾಡುತ್ತೇವೆ.

3) ಅಂದಾಜು 3 ವರ್ಷಗಳ ಹಿಂದೆ ಮಧ್ಯಾಹ್ನ 3 ಗಂಟೆ ಸುಮಾರಿಗೆ ಸದರಿ ನನ್ನ ಜಮೀನಿಗೆ ಹೋಗಿದ್ದೆ . ತೋಟದಲ್ಲಿ ಅಡಿಕೆ ಪಟ್ಟೆ ಕುಯ್ಯುತ್ತಿದ್ದೆ . ಆಗ ಆರೋಪಿ ರಾಜಣ್ಣ ಅಲ್ಲಿಗೆ ಬಂದು ನನ್ನ ಜೊತೆ ಗಲಾಟೆ ಮಾಡಿ ಮಾದಿಗ ಮುಂಡೆ, ಸೂಳೆ ಎಂದು ಬೈದು , ಜಾತಿನಿಂದನೆ ಮಾಡಿ ಚಪ್ಪಲಿ ಕಾಲಿನಿಂದಹೊಟ್ಟೆಯ ಭಾಗಕ್ಕೆ ಒದ್ದರು. ಆರೋಪಿ ಗಂಗಣ್ಣ ಸಹ ನನ್ನೊಂದಿಗೆ ಜಗಳ ತೆಗೆದು ಮಾದಿಗ ಸೂಳೆ ಎಂದು ಬೈದು , ಈ ಮುಂಡೆಯನ್ನು ಇದೇ ಜಮೀನಿನಲ್ಲಿ ರೇಪ್ ಮಾಡಿ ಸಾಯಿಸಿ ಹಾಕೋಣವೆಂದು ಹೇಳಿದರು. ನಾನು ಆ ಸಮಯದಲ್ಲಿ ಓಡಿ ಹೋಗಲು ಪ್ರಯತ್ನಿಸಿದಾಗ ಆರೋಪಿ ಗಂಗಣ್ಣ ನನ್ನ ನ್ನು ಬೆನ್ನಟ್ಟಿ ನಾನು ಧರಿಸಿದ್ದ ನೈಟಿಯ ಎದೆ ಭಾಗದಲ್ಲಿ ಹಿಡಿದು ಹರಿದು ಹಾಕಿರುತ್ತಾನೆ. ಅಲ್ಲಿಯೇ ಪಕ್ಕದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಚಾಸಾ-2 ರವರು ಜಗಳ ನೋಡಿ ಬಿಡಿಸಲು ಬಂದಾಗ ಆರೋಪಿಗ ಗಂಗಣ್ಣರವರು ದೊಣ್ಣೆಯಿಂದ ಆಕೆಗೆ ಹೊಡೆದಿದ್ದಾರೆ . ಆಗ ಆರೋಪಿ ಅಂಜನಪ್ಪರವರು ಚಾಸಾ-2 ರವರಿಗೆ ಹೊಡೆಯುತ್ತಿದ್ದರು. ಆರೋಪಿತರು ನಾವು ಉಳುಮೆ ಮಾಡುತ್ತಿದ್ದ ಜಮೀನು ತಮ್ಮದು ಎಂದು ಗಲಾಟೆ ಮಾಡಿರುತ್ತಾರೆ.

4) ಘಟನೆಯಾದ ನಂತರ ಚಿಕ್ಕನಾಯಕನಹಳ್ಳಿ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ಅದೇ ದಿನ ಸಂಜೆ 7 ಗಂಟೆಗೆ ಪೊಲೀಸ್ ಠಾಣೆಗೆ ಹೋಗಿ ದೂರು

ನೀಡಿರುತ್ತೇನೆ . ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನುನಿಪಿ-1(ಎ) ಎಂದು ಗುರುತಿಸಲಾಯಿತು. ದೂರು ನೀಡಿದ ನಂತರ ಪೊಲೀಸರು ಮರುದಿನ ಮಧ್ಯಾಹ್ನ 3 ಗಂಟೆಗೆ ಕೃತ್ಯನಡೆದ ಸ್ಥಳಕ್ಕೆ ಬಂದಿದ್ದರು. ಆ ಸಮಯದಲ್ಲಿ ಮೋಹನ ಮತ್ತು ಆನಂದ , ಗಿರಿಯಪ್ಪ ಸಹ ಹಾಜರಿದ್ದರು. ಪೊಲೀಸರು ಸ್ಥಳದಲ್ಲಿ ಮಹಜರ್ ಮಾಡಿರುತ್ತಾರೆ. ಮಹಜರ್ ನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಒಂದು ದೊಣ್ಣೆ ಮತ್ತು ನನ್ನ ಹರಿದ ನೈಟಿಯನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಒಂದು ದೊಣ್ಣೆ ಮತ್ತು ಹರಿದ ನೈಟಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು , ಮರದ ದೊಣ್ಣೆಯನ್ನು ಮು ಮಾ-1 ಎಂದು, ಕೆಂಪು ಮತ್ತು ನೀಲಿ ಬಣ್ಣದ ನೈಟಿಯನ್ನು ಮು ಮಾ-2 ಎಂದು ಗುರುತಿಸಲಾಯಿತು. ಪೊಲೀಸರು ಕೃತ್ಯ ನಡೆದ ಸ್ಥಳದಲ್ಲಿ ಪಂಚನಾಮೆ ಕಾಲದಲ್ಲಿ ಪೊಟೋಗಳನ್ನು ತೆಗೆದಿರುತ್ತಾರೆ. ಸಾಕ್ಷಿಗೆ 3 ಪೋಟೋಗಳನ್ನು ತೋರಿಸಲಾಗಿ ಅದರಲ್ಲಿ ತನ್ನ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು , 3 ಪೋಟೋಗಳನ್ನು ನಿಪಿ-3 ರಿಂದ 5 ಎಂದು ಗುರುತಿಸಲಾಯಿತು. ಪೊಲೀಸರು ನನ್ನ ನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುತ್ತಾರೆ . ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿಯ ಪರ ಶ್ರೀ ಎನ್ ಬಿ ವಕೀಲರಿಂದಃ</u>

ಆರೋಪಿಗಳ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮಂದೂಡಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇ ಸ ಇದೆ ಎಂದು ಒಪ್ಪಿದ್ದಾರೆ.

**3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
ತುಮಕೂರು